ಕೆಂಡದ ಮೇಲೆ ನಿಂತಂತಾಗುವ ತನಗೆ, ಅವಳ ಮಕ್ಕಳ ಮೇಲೇಕೆ ಆಸೆಯಾಗುತ್ತದೆ? ಬಿಡಾರದಲ್ಲಿ ಉಳಿಯುವ ಯಾರಾರಿಗೋ ಅಡುಗೆ ಅಟ್ಟುವ ಅವಳ ಮನಃಸ್ಥಿತಿ ತನ್ನ ಕಲ್ಪನೆಗೇಕೆ ನಿಲುಕುವುದಿಲ್ಲ? ನಿತ್ಯದ ಜಂಜಾಟದಲ್ಲೂ ಪ್ರಶಾಂತವಾಗಿರುವ ಅವಳ ಮನಸ್ಸು ತನ್ನ ಪ್ರಕ್ಷುಬ್ಧ ಮನಕ್ಕೇಕೆ ಅರ್ಥವಾಗುವುದಿಲ್ಲ? ಸಂಬಂಧ ಪಟ್ಟವರಷ್ಟೇ ಸಂಬಂಧಿಕರೇ? ಹಾಗಾದರೆ ಅವಳ ತುಂಬಿದ ಪರಿವಾರದ ಬಗ್ಗೆ ತನಗಿರುವುದು ಮೆಚ್ಚುಗೆಯೋ ಹೊಟ್ಟೆಕಿಚ್ಚೋ... ಎಂದೆಲ್ಲಾ ಚಿಂತಿಸುತ್ತಾ ಹೈರಾಣಾಗುತ್ತಿದ್ದಳು. ತನ್ನ ಪ್ರಶ್ನೆಗಳಿಗೆ ಉತ್ತರ ಹುಡುಕಲೋ ಎಂಬಂತೆ ಬಿಡಾರದೊಡನೆ ಇನ್ನಷ್ಟು ಒಡನಾಡುತ್ತಿದ್ದಳು.

ಮಳೆಗಾಲ ಇನ್ನೇನು ಶುರುವಾಗುವುದರಲ್ಲಿತ್ತು. ರಸ್ತೆ ಕಾಮಗಾರಿಗೂ ಬ್ರೇಕು ಹಾಕುವ ಲಕ್ಷಣವಿತ್ತು. ಎಂದಿನ ಹಾಗೆ ಅಂದೂ ಬಂದ ಶಿವಮ್ಮ ಅಂಗಳದಲ್ಲಿದ್ದ ಯಾವ್ಯಾವುದೋ ಹೂವಿನ ಗಿಡ ಕೇಳತೊಡಗಿದಳು. 'ಇಲ್ಲೆಂತ ಗಿಡ ನೆಡ್ತೀಯನೆ ನೀನು?' ಎಂಬ ಗಂಗಕ್ಕನ ಮಾತಿಗೆ, 'ಹಂಗ ಕೊಟ್ಟೆಯೊಳಗ ಮಣ್ ಹಾಕಿ ಊರಿ ಇಡ್ತೇನ್ರಿ. ನಮ್ಮನಿಗ್ ಹೋದ್ ಮ್ಯಾಲ ನೆಟ್ಟಾತಲ್ರೀ' ಎಂದಳು. ಅವರು ಬಿಡಾರ ಕೀಳುವ ಗಳಿಗೆ ಸಮೀಪಿಸುತ್ತಿದೆ ಎಂಬ ಅರಿವು ಮೂಡುತ್ತಿದ್ದಂತೆಯೇ ಮೆಲ್ಲಗೆ ತಲ್ಲಣಿಸಿದಳು ಗಂಗಕ್ಕ. 'ಯಾವಾಗ್ಲೇ ಹೊರಡದು?' ಸಣ್ಣ ದನಿಯಲ್ಲಿ ಕೇಳಿದಳು. 'ಇನ್ನೊಂದೇಡ್ ದಿನದಾಗ್ ಹೊಂಡಾದ್ರಿ. ಮುಂದಕ್ ಮತ್ತ ಇಲ್ಲೇ ಎಲ್ಲಾರೂ ಬರೂಣಂತ್ರೀ. ನಿಮ್ ಮನಿ ಮುಂದೂ ಡಾಂಬ್ರ ಹಾಕೂದೈತಲ್ರೀ' ಎಂದು ಬಾಯಿ ತುಂಬಾ ನಕ್ಕು ಹೊರಟು ಹೋದಳು ಶಿವಮ್ಮ, ಮುಂದಿನ ಪಯಣಕ್ಕೆ ತಾನು ಸದಾ ಸಿದ್ಧವೆಂಬಂತೆ. ಆವತ್ತು ಮಧ್ಯಾಹ್ನ ಗಂಗಕ್ಕನ ಅಡುಗೆಗೆ ರುಚಿಯೇ ಇಲ್ಲ.

ಆ ದಿನ ಮುಂಜಾನೆಯಿಂದಲೇ ಮೋಡ ದಟ್ಟೈಸುತ್ತಿತ್ತು. ಬೆಳಗಿನಿಂದ ಬೀಳುತ್ತಿದ್ದ ಒಂದೊಂದೇ ಹನಿಗಳ ನಡುವೆ ಶಿವಮ್ಮನ ತುಂಬಿದ ಸಂಸಾರ ಟ್ರಕ್ಕಿಗೆ ಬಿಡಾರ ಏರಿಸುವುದನ್ನು ಅಂಗಳದಿಂದಲೇ ನೋಡುತ್ತಿದ್ದಳು ಗಂಗಕ್ಕ. ಹೆಚ್ಚು ಮಾತಿಲ್ಲದೆ ಹೋಗಿ ಬರುತ್ತೇವೆ ಎಂದು ನಡೆದಿದ್ದಳು ಶಿವಮ್ಮ. ಅವರು ತೆರಳಿದ ತಾಸು ಗಳಿಗೆಯಲ್ಲೇ 'ಧೋ' ಎಂದು ಮಳೆ ಸುರಿಯಲಾರಂಭಿಸಿತು. ಗುಡುಗು, ಮಿಂಚಿನ ಆರ್ಭಟ ಬೇರೆ. 'ಪುಣ್ಯ! ಮಳೆ ಶುರು ಆಪ್ಪದ್ರೊಳಗೆ ಆ ಬಿಡಾರದವ್ವು ಹೋದ. ಇಲ್ಲದಿದ್ರೆ ಮಕ್ಕಳುಮರಿ ಕಟ್ಕ್ಯಂಡು ಕಷ್ಟಿತ್ತು. ಮುಂದಕ್ಕೆ ಬಂದಾಗ ದಪ್ಪ ಟಾರ್ಪಲ್ ತಂದ್ಕಂಡ್ರೆ ಸುಖ' ಎಂದು ನಿಟ್ಟುಸಿರು ಬಿಟ್ಟಳು ಗಂಗಕ್ಕ. ನೆಲದ ಮೇಲೊಂದೇ ಅಲ್ಲ, ಅವಳ ಮನದ ಮೇಲೂ 'ಧೋ' ಎಂದು ಮಳೆ ಸುರಿಯುತ್ತಿತ್ತು.

**ಅಲಕಾ ಕಟ್ಟೆಮನೆ**

ಬೆಂಗಳೂರಿನ ಸುದ್ದಿಮನೆಯೊಂದರಲ್ಲಿ ಪತ್ರಕರ್ತೆಯಾಗಿ ಕೆಲಕಾಲ ಕೆಲಸ. ನಂತರದ ಕೆಲವು ವರ್ಷಗಳು ಅಮೆರಿಕೆಯಲ್ಲಿ ವಾಸ. ಪ್ರಸ್ತುತ ಮೈಸೂರಿನಲ್ಲಿ ನೆಲೆ. 'ಶಾಲ್ಮಲೆಯ ಹೊನಲಲ್ಲಿ' ಎಂಬ ಕಥಾಸಂಕಲನ ಪ್ರಕಟವಾಗಿದೆ.